State Science Institute

264. Sri M. MALLAPPA (Birur).—

Will the Minister for Education be pleased to state :—

(*a*) whether there is a State Science Institute attached to the Directorate of Public Instruction, Bangalore ;

(*b*) if so, the number of High Schools that are in receipt of grant-in-aid from the Science Institute for the year 1969-70 ;

(*c*) the steps the Government intends to take for making the Institute useful and popular for imparting scientific knowledge to the High School students ?

Sri N. M. KOTRABASAIAH SOGI (Deputy Minister for Education).-

(*a*) Yes.

(*b*) Nil.

(*c*) These are : (i) organisation of short-term and long-term courses for science Teachers at the school level, (ii) organisation of Work shops for preparation of instructional material and improvisation of science apparatus, (iii) provision of Guidance regarding organisation of science clubs, and (iv) inspection of High Schools for guiding science teachers.

ಶ್ರೀ ಎಂ. ಮಲ್ಲಪ್ಪ.—ಈ ಇನ್ಸ್ಟಿಟ್ಯೂಟ್ ಯಾವಾಗ ಸ್ಥಾಪನೆಯಾಯಿತು ? ಇದಕ್ಕೆ ವರ್ಷಂ ಪ್ರತಿ ಎಷ್ಟು ಹಣ ಖರ್ಚು ಮಾಡುತ್ತಾ ಇದ್ದೀರಿ ?

† ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.— 1-2-1964ರಲ್ಲಿ ಇದು ಪ್ರಾರಂಭವಾಯಿತು. ಎರಡನೇ ಪಂಚವಾರ್ಷಿಕಯೋಜನೆಗಿಂತ ಮುಂಚಿತವಾಗಿ. ಹೈಸ್ಕೂಲುಗಳಲ್ಲಿ ವಿಜ್ಞಾನಬೋಧನೆಯ ಕ್ರಮವನ್ನು ಉತ್ತಮಪಡಿಸಬೇಕೆಂಬ ಉದ್ದೇಶದಿಂದ ಇದು ಸ್ಥಾಪನೆಯಾಯಿತು. 15 ಲಕ್ಷ ರೂಪಾಯಿಗಳವರೆಗೂ ಹಣ ಖರ್ಚು ಮಾಡಲಾಗಿದೆ.

ಶ್ರೀ ಎಂ. ಮಲ್ಲಪ್ಪ.—19 ಜಿಲ್ಲೆಗಳಲ್ಲಿ ಎಷ್ಟು ಜನ ಉಪಾಧ್ಯಾಯರಿಗೆ ಟ್ರೈನಿಂಗ್ ಕೊಟ್ಟಿದ್ದೀರಿ ? ಯಾವ ಯಾವ ಜಿಲ್ಲೆಗೆ ಎಷ್ಟೆಷ್ಟು ಪ್ರಾತಿನಿಧ್ಯ ಕೊಟ್ಟಿದ್ದೀರಿ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಆ ವಿವರವಾದ ಮಾಹಿತಿ ನನ್ನಲ್ಲಿ ಇಲ್ಲ. ಸುಮಾರು 600 ಹೈಸ್ಕೂಲುಗಳಿಗೆ ಇದರಿಂದ ಲಾಭವಾಗತಕ್ಕರೀತಿಯಲ್ಲಿ ಶಿಕ್ಷಕರಿಗೆ ತರಬೇತು ಕೊಡಲಾಗಿದೆ.

ಶ್ರೀ ಎಂ. ಮಲ್ಲಪ್ಪ.—ವರ್ಕ್‌ಷಾಪ್ ಇಂಪ್ರೂವ್‌ಮೆಂಟ್ ಮಾಡುತ್ತೇವೆ ಎಂದು ಹೇಳಿದ್ದೀರಿ. ಈ ಬಗ್ಗೆ ಯಾವ ಯಾವ ಇಂಪ್ರೂವ್‌ಮೆಂಟ್ ಮಾಡಿದ್ದೀರಿ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಹೊಸದಾಗಿ ವಿಜ್ಞಾನದ ಉಪಕರಣಗಳನ್ನು ತಯಾರು ಮಾಡುವುದು, ಲೋಕಲ್ ಮೆಟೀರಿಯಲ್ಸ್ ಇಟ್ಟುಕೊಂಡು ಹೆಚ್ಚು ಖರ್ಚಿಲ್ಲದೆ ಸೈಂಟಿಫಿಕ್ ಅಪರೇಟಸ್ ತಯಾರು ಮಾಡುವುದು ಅಲ್ಲಿನ ಕೆಲಸ ಕಾರ್ಯಗಳಲ್ಲಿ ಒಂದಾಗಿದೆ.

ಶ್ರೀ ಬಿ. ಎಂ. ಇದಿನಬ್ಬ.—ರಾಜ್ಯದಲ್ಲಿ ಈ ವಿಜ್ಞಾನ ಸಂಬಂಧವಾದ ಇನ್‌ಸ್ಟಿಟ್ಯೂಟುಗಳನ್ನು ಸ್ಥಾಪನೆ ಮಾಡಿರುವುದರಿಂದ ಭವಿಷ್ಯತ್ತಿನಲ್ಲಿ ಕಾಣಬಹುದಾದ ವಿಶೇಷ ಪ್ರಗತಿಯಾದರೂ ಏನು ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ವಿಜ್ಞಾನ ಬೋಧನ ಕಾರ್ಯದಲ್ಲಿ ಬೇಕಾದಷ್ಟು ಪ್ರಗತಿಯಾಗಿದೆ. ಅದಕ್ಕೆ ತಕ್ಕಂತ ಆಧುನಿಕ ವಿಜ್ಞಾನ ಸಂಶೋಧನೆಯ ತಿಳುವಳಿಕೆಯನ್ನು ಮಕ್ಕಳಿಗೆ ಮಾಡಿಕೊಡತಕ್ಕ ಕಾರ್ಯ ಪ್ರೈಮರಿ ಮತ್ತು ಸೆಕೆಂಡರಿ ಶಾಲೆಗಳಲ್ಲಿ ನಡೆಯುತ್ತಾ ಇದೆ.

Sri H. SIDDAVEERAPPA.—Is it a Government of India sponsored scheme? Where is this institute located?

Sri N. M. KOTRABASAIAH SOGI.—It is a Centrally sponsored scheme and is located in Bangalore.

Sri D. B. KALMANKAR.—How many workshops were arranged and in what districts and how many high schools have been benefited?

Sri N. M. KOTRABASAIAH SOGI.—Workshops have been arranged in almost all the districts; but I don't have detailed information. As I have already said, about 600 high schools have been benefited by this scheme.

Sri G. DUGGAPPA.—Who is the head of this institute? May I know whether any laboratory is attached to it?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಅದಕ್ಕೆ ಜೆ. ಎಂ. ಟಿ. ರಾಜನ್ ಎಂಬ ಒಬ್ಬರು ಮುಖ್ಯಸ್ಥರಿದ್ದಾರೆ, ಅವರು ಇನ್‌ಸ್ಟಿಟ್ಯೂಟಿನ ಡೈರೆಕ್ಟರು. ಅಂಥ ದೊಡ್ಡ ಲ್ಯಾಬೊರೇಟರಿ ಇಲ್ಲ. ಅದು ಅವಶ್ಯಕವಾದ ಎಕ್ವಿಪ್‌ಮೆಂಟ್ ಒದಗಿಸುವ ಲ್ಯಾಬೊರೇಟರಿ ಆಗಿದೆ.

ಶ್ರೀ ಎಚ್. ಬಿ. ಜ್ವಾಲನಯ್ಯ.—ಮೈಸೂರು ರಾಜ್ಯದಲ್ಲಿ ಸುಮಾರು 5 ವಿಜ್ಞಾನ ಕೇಂದ್ರಗಳಿವೆ, ಅವು ಈ ಮುಂಚೆ ಪ್ರಾರಂಭವಾಗಿವೆ, ಗೊತ್ತಾಗಿರುವ ಅವಧಿ ಮುಗಿದಮೇಲೆ ರಾಜ್ಯ ಸರಕಾರ ನಡೆಸುವುದಾಗಿ ಭರವಸೆ ಕೊಟ್ಟಿತ್ತು, ಅವು ವಿದ್ಯಾ ಇಲಾಖೆಗೆ ಸೇರಿವೆ. ಅವು ಹೇಗೆ ನಡೆಯುತ್ತಿವೆ? ಮೂಡಬಿದ್ರೆ ಮುಂತಾದ ಕಡೆ ಇರುವ ಈ ಸಂಸ್ಥೆಗಳಿಂದ ಸಹಾಯ ವಾಗುತ್ತದೆಯೇ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಆ ವಿಜ್ಞಾನ ಕೇಂದ್ರಗಳಿಗೂ ಇದಕ್ಕೂ ಸಂಬಂಧವಿಲ್ಲ. ಇದು ಹೈಸ್ಕೂಲ್ ಮತ್ತು ಹೈಸ್ಕೂಲುಗಳಲ್ಲಿ ವಿಜ್ಞಾನ ಭೋಧನೆ ಕ್ರಮ ಉತ್ತಮ ಪಡಿಸಲು ಮಕ್ಕಳಿಗೆ ಹೊಸ ವಿಧಾನದ ರೀತಿಯಲ್ಲಿ ಬೋಧನೆಯಾಗಬೇಕು ಎಂದು ಅದಕ್ಕೆ ತರಬೇತಿ ಶಿಕ್ಷಕರಿಗೆ ಕೊಡಲು ಪ್ರಾರಂಭಿಸಿರುವುದು. ಮಾನ್ಯ ಸದಸ್ಯರು ಹೇಳಿದ್ದು ರೈತರಿಗೆ ವ್ಯವಸಾಯದ ವಿಚಾರವಾಗಿ ತಿಳಿವಳಿಕೆ ಕೊಡಲು ಪ್ರಾರಂಭಿಸಿರುವುದು.

ಶ್ರೀ ಎಂ. ಮಲ್ಲಪ್ಪ.—ಈ ಸಂಸ್ಥೆ ಇರುವುದು ಬಹಳ ಜಿಲ್ಲೆಗಳಿಗೆ ಗೊತ್ತಿಲ್ಲ. ಆದರೂ ಇದಕ್ಕಾಗಿ ಖರ್ಚಾಗುತ್ತಿದೆ. ಈ ರೀತಿ ಅಪವ್ಯಯ ಮಾಡುವುದಕ್ಕೆ ಬದಲಾಗಿ ಹೈಸ್ಕೂಲುಗಳಲ್ಲಿ ಲ್ಯಾಬೊರೇಟರಿ ಎಕ್ವಿಪ್‌ಮೆಂಟ್ ಇಲ್ಲದಿರುವ ಕಡೆಗೆ ಅದನು ಒದಗಿಸಲು ಇದಕ್ಕೆ ಕೊಡುವ ಗ್ರಾಂಟನ್ನು ಅದಕ್ಕೆ ಉಪಯೋಗಮಾಡುವುದು ಒಳ್ಳೆಯದಲ್ಲವೇ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಈಗಾಗಲೇ ಒದಗಿಸಿದ್ದ ಹಣ ಖರ್ಚಾಗಿದೆ. ಮತ್ತು ಈ ಸ್ಕೀಂ ಮುಗಿದುಹೋಗಿದೆ. ಈಗ ರಾಜ್ಯ ಸರಕಾರ ನಡೆಸಬೇಕು. 1961 ರ ಆಖೈರವರೆಗೆ ಪ್ರಾರಂಭಿಸಿರುವ ಎಲ್ಲಾ ಹೈಸ್ಕೂಲುಗಳಿಗೂ ಇದರ ಲಾಭ ಸಿಕ್ಕಿದೆ. ಲ್ಯಾಬೊ ರೇಟರಿ ಮತ್ತು ಬೋಧನಾಕ್ರಮ ಉತ್ತಮವಾಗಿದೆ.

Sri C. K. RAJAIAH SHETTY.—In regard to (*c*) (iii) in the answer, I want to know the number of Science Clubs in existence. I also wish to know whether there are any magazines and periodicals published by these clubs.

Sri N. M. KOTRABASAIAH SOGI.—Some of the Clubs are publishing periodicals. I do not have detailed information regarding the number of the Clubs that are in existence. If a separate question is put, I shall answer.

ಶ್ರೀ ಕೆ. ಎಚ್. ರಂಗನಾಥ್.—ಹೈಸ್ಕೂಲಿನ ಶಾಲೆಯಲ್ಲಿ ಎಷ್ಟನೆಯ ತರಗತಿಯಿಂದ ಈ ರೀತಿ ವಿಜ್ಞಾನದ ಪಾಠ ಹೇಳುವ ವ್ಯವಸ್ಥೆಯಾಗಿದೆ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—5 ನೆಯ ತರಗತಿಯಿಂದ.